**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>**
**<u>ನ್ಯಾಯಾಲಯದಲ್ಲಿ, ಜಗಳೂರು.</u>**

**<u>ಸಿ.ಸಿ.ನಂ:1866/2025</u>**

ಪಿರ್ಯಾದಿದಾರ**:** ಶ್ರೀ. ಮಹಮ್ಮದ್ ಜಹೀರ್ ಅಹಮ್ಮದ್ ತಂದೆ ಜಿ.ಅಬ್ದುಲ್ ಸತ್ತಾರ್
ವಯಸ್ಸು:**37** ವರ್ಷ, ವೃತ್ತಿ:ಮಾಲೀಕರು, ಎಸ್.ಎಸ್. ಮಾರ್ಟ್ ,
ವಾಸ:**#1071,** ಎಸ್.ಎಸ್. ಮಂಜಿಲ್ , **1** ನೇ ಮೇನ್ , **1** ನೇ ಕ್ರಾಸ್ ,
ಸರ್ಕಾರಿ ಆಸ್ಪತ್ರೆ ಹಿಂಭಾಗ,
ತಾ: ಜಗಳೂರು, ಜಿಲ್ಲೆ: ದಾವಣಗೆರೆ.

**-:: ವಿರುದ್ಧ ::-**

ಆರೋಪಿ **:** ಶ್ರೀಮತಿ. ಬಸಮ್ಮ ಬಿನ್ ತಿಮ್ಮಣ್ಣ
ವಯಸ್ಸು:**48** ವರ್ಷ, ವೃತ್ತಿ: ಹೋಟೇಲ್ ವ್ಯವಹಾರ
ವಾಸ:- ನವೀನ್ ಟೀ ಸ್ಟಾಲ್
ಚಳ್ಳಕೆರೆ ಗೇಟ್ , ಭಾರತ್ ಪೆಟ್ರೋಲ್ ಬಂಕ್ ಹತ್ತಿರ
ಜಗಳೂರು ಟೌನ್ ,ತಾ:ಜಗಳೂರು, ಜಿಲ್ಲೆ: ದಾವಣಗೆರೆ.

**<u>ಆಪಾದನೆ</u>**

ಆರೋಪಿಯಾದ ನೀವು ಪಿರ್ಯಾದಿದಾರರಿಂದ ದಿನಾಂಕ:**03.02.2025** ರಂದು ರೂ.**5,00,000/-** ಕೈಗಡ ಸಾಲವನ್ನು ಪಡೆದುಕೊಂಡಿರುತ್ತೀರಿ, ಸದರಿ ಹಣವನ್ನು **06** ತಿಂಗಳ ಒಳಗಾಗಿ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ, ಸದರಿ ಸಾಲದ ತೀರುವಳಿಗಾಗಿ ಅದೇ ದಿನ ಒಂದು ಕೆನರಾ ಬ್ಯಾಂಕ್ ಚೆಕ್ ನಂ.**322966** ನ್ನು ಮುಂಗಡ ದಿನಾಂಕ:**02.08.2025** ಎಂದು ನಮೂದಿಸಿ ರೂ.**5,00,000/-** ರೂಗಳಿಗೆ

ಪಿರ್ಯಾದುದಾರರ ಹೆಸರಿಗೆ ನಗದೀಕರಿಸಿಕೊಳ್ಳಲು ಕೊಟ್ಟಿರುತ್ತೀರಿ. ದಿನಾಂಕ:**11.08.2025** ರಂದು ಸದರಿ ಚೆಕ್ಕನ್ನು ಕರ್ನಾಟಕ ಗ್ರಾಮೀಣಾ ಬ್ಯಾಂಕ್, ಜಗಳೂರು ಶಾಖೆಯಲ್ಲಿ ನಗದೀಕರಿಸಿಕೊಳ್ಳಲು ಹಾಜರುಪಡಿಸಿರುತ್ತಾರೆ. ಆದರೆ ಸದರಿ ಚೆಕ್ ನಗದಾಗದೇ ದಿನಾಂಕ:**12.08.2025** ರಂದು **["Funds Insufficient "]** ಎಂಬ ಷರಾದ ಹಿಂಬರಹದೊಂದಿಗೆ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಚಕ್ ನಗದೀಕರಣವಾಗದೇ ಹಿಂದಿರುಗಿ ಬಂದಿರುತ್ತದೆ. ಆದ್ದರಿಂದ ನೀವು ಮತ್ತೆ ಸದರಿ ಹಣವನ್ನು ಇಂದು ಕೊಡುತ್ತೇನೆ, ನಾಳೆ ಕೊಡುತ್ತೇನೆ, ಎಂದು ಸುಳ್ಳು ಹೇಳುತ್ತಾ ಬಂದಿರುತ್ತೀರಿ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ:**25.08.2025** ರಂದು ಆರ್.ಪಿ.ಎ.ಡಿ. ಪೋಸ್ಟ್ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸನ್ನು ದಿ:**26.08.2025** ರಂದು ಸ್ವೀಕರಿಸಿರುತ್ತೀರ. ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ. ಆದ್ದರಿಂದ ಆರೋಪಿಯಾದ ನೀವು ಫಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಹಣವನ್ನು ತೀರುವಳಿ ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಕಲಂ **138** ನೆಗೋಷಿಯಬಲ್ ಇನೂಷ್ಟ್ರುಮೆಂಟ್ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತೀರೆಂದು ಆಪಾದಿಸಲಾಗಿದೆ.

ಸಹಿ/-

ದಿನಾಂಕ **:03.06.2026** **ದಿ.ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ,**
ಸ್ಥಳ : ಜಗಳೂರು. **ಜಗಳೂರು.**

## ಆರೋಪಿಯ ಹೇಳಿಕೆ

ಪ್ರಶ್ನೆಃ  ಈ ಮೇಲೆ ಹೇಳಲಾದ ಆಪಾದನೆ ನಿಮಗೆ ತಿಳಿಯಿತೇ**?**

ಉತ್ತರಃ

ಪ್ರಶ್ನೆಃ ಈ ಮೇಲೆ ಹೇಳಲಾದ ಆಪಾದನೆಯನ್ನು ನೀನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ**?**

ಉತ್ತರಃ

**(**ಈ ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ನಾನೇ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಅಂತ ಈ ಮೂಲಕ ದೃಢೀಕರಿಸುತ್ತೇನೆ**.)**

ಸಹಿ**/-**

ದಿನಾಂಕ **03.06.2026** **ದಿ.ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ,**
ಸ್ಥಳ **:** ಜಗಳೂರು**.** **ಜಗಳೂರು.**